# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## ಓ.ಎಸ್. 64/2013

ಸಾಕ್ಷಿಯನ್ನು ದಿಃ **15.11.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿ ಪರಃಶ್ರೀ. ಆರ್.ಎಸ್. ವಕೀಲರಿಂದ:**

ದಿನಾಂಕಃ 25.10.2025 ರಂದು ನಾನು ಈ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯುವಾಗ, ನಾನು ಐ.ಟಿ.ಆರ್. ನ್ನು ಮಂಡ್ಯದಲ್ಲಿ ಸಲ್ಲಿಸುತ್ತೇನೆ, ನನ್ನ ಆಧಾರ್ ಕಾರ್ಡ್ ಸಂಖ್ಯೆ ಮತ್ತು ಪಾನ್ ಐಡಿ ಸಂಖ್ಯೆ ಈಗ ಹೇಳಲು ಆಗುವುದಿಲ್ಲ, ದಾಖಲೆ ಇದೆ. ಹಾಜರುಪಡಿಸುತ್ತೇನೆ ಎಂದು ಹೇಳಿದ್ದು ಈ ದಿನ ಸದರಿ ದಾಖಲೆಗಳನ್ನು ತಂದಿದ್ದೀರಾ?ಎಂದರೆ ಇಲ್ಲ. ನಾನು ಅದೇ ದಿನ ಸಾಕ್ಷಿ ನುಡಿಯುವಾಗ 1987 ರಿಂದ ಇಲ್ಲಿಯವರೆಗೆ ನಾನು ಸಲ್ಲಿಸಿದ ಐ.ಟಿ.ಆರ್. ದಾಖಲೆಗಳನ್ನು ಹಾಜರುಪಡಿಸಬಹುದು ಎಂದು ಕೇಳಿದ ಪ್ರಶ್ನೆಗೆ 3-4 ವರ್ಷದ ದಾಖಲೆಗಳನ್ನು ಹಾಜರುಪಡಿಸಬಹುದು ಎಂದು ಹೇಳಿದ್ದು ಸದರಿ ದಾಖಲೆಗಳನ್ನು ತಂದಿದ್ದೀರಾ ಎಂದರೆ ಇಲ್ಲ ಹುಡುಕಿದರೂ ಸಿಗುತ್ತಿಲ್ಲ. ನನ್ನ ಆಡಿಟರ್ ಹೆಸರು ಸುಬ್ರಮಣ್ಯ. ಅವರ ಕಛೇರಿಯ ವಿಳಾಸ ಹೇಳಲಾಗುತ್ತದೆಯೇ ಎಂದರೆ ಗೊತ್ತಿಲ್ಲ ನನಗೆ ಆರೋಗ್ಯ ಸರಿಯಿಲ್ಲದೇ ಇರುವ ಕಾರಣ ಅದನ್ನು ನನ್ನ ಮಗ ನೋಡಿಕೊಳ್ಳುತ್ತಾನೆ. ಯಾವ ಬ್ಯಾಂಕಿನಲ್ಲಿ ನಿಮ್ಮ ಖಾತೆ ಇದೆ ಎಂದು ಖಾತೆ ಸಂಖ್ಯೆ ಹೇಳಲಾಗುತ್ತದೆಯೇ ಎಂದರೆ ಇಲ್ಲ. ನನ್ನ ಪಾನ್ ಸಂಖ್ಯೆ ನೆನಪಿಲ್ಲ. ದಿನಾಂಕಃ 07.11.2002 ರಂದು ವಾದಿ ಮತ್ತು ಅವರ ಗಂಡ ನನಗೆ ಅಮೇರಿಕಾದಿಂದ ಡಾಲರ್ ರೂಪದಲ್ಲಿ 10 ಸಾವಿರ ಡಾಲರ್ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ದಿನಾಂಕಃ 10.06.2004 ರಂದು 25 ಸಾವಿರ ಡಾಲರ್ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ದಿನಾಂಕಃ 21.10.2004 ರಂದು 25 ಸಾವಿರ ಡಾಲರ್ ಕಳುಹಿಸಿದ್ದಾರೆ ಎಂದರೆ ಸರಿಯಿಲ್ಲ. ದಿನಾಂಕಃ 20.02.2003 ರಂದು
60 ಸಾವಿರ ಡಾಲರ್ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಪೈಕಿ ನನ್ನ ತಾಯಿ ಹೊಂಬಾಳಮ್ಮನವರ ಹೆಸರಿನಲ್ಲಿರುವ ಸ್ವತ್ತುಗಳನ್ನು ನನ್ನ ತಂದೆ ಪೇಟಯ್ಯನವರು ಹಣ ಕೊಟ್ಟು ನನ್ನ ತಾಯಿಯ ಹೆಸರಿನಲ್ಲಿ ಖರೀದಿಸಿದ ಸ್ವತ್ತುಗಳಾಗಿವೆ ಎಂದರೆ ಸರಿಯಲ್ಲ.

ನನ್ನ ತಾಯಿ ಹೊಂಬಾಳಮ್ಮನವರ ಹೆಸರಿನಲ್ಲಿ ಖರೀದಿಸಿದ ಸ್ವತ್ತುಗಳ ಕ್ರಯಪತ್ರದಲ್ಲಿರುವ ವಿಷಯಗಳೆಲ್ಲಾ ಸತ್ಯವಾಗಿದೆ ಎಂದರೆ ಸರಿ. ನಿಮ್ಮ ತಂದೆ ತಾಯಿ, ಸಹೋದರರು ಹಾಗೂ ಸಹೋದರಿಯರ ಮಧ್ಯೆ ವಿಭಾಗ ಆಗಿದೆಯೇ ಎಂದರೆ ಇದ್ದ ಒಂದು ಮನೆಯನ್ನು ಸ್ವಂತ ಇಚ್ಛೆಯಿಂದ ಬರೆದು ಕೊಟ್ಟಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಆ ರೀತಿ ಸ್ವಂತ ಇಚ್ಛೆಯಿಂದ ಬರೆದು ಕೊಟ್ಟಿದ್ದಾರೆ ಎನ್ನುವ ದಿನಾಂಕ ತಿಂಗಳು ಇಸವಿ ನೆನಪಿದೆಯೇ ಎಂದರೆ ಇಲ್ಲ. ಹೊಂಬಾಳಮ್ಮನವರ ಹೆಸರಿನಲ್ಲಿದ್ದ ಆಸ್ತಿಯನ್ನು ಸಹೋದರರು ಸ್ವಂತ ಇಚ್ಛೆಯಿಂದ ಬರೆದುಕೊಟ್ಟಿದ್ದಾರೆ ಎನ್ನುವ ಕಾಲಕ್ಕೆ ಆ ಆಸ್ತಿಯ ಬೆಲೆ ಎಷ್ಟಿತ್ತು ಎಂದರೆ ಗೊತ್ತಿಲ್ಲ. ಆ ರೀತಿ ಸ್ವಂತ ಇಚ್ಛೆಯಿಂದ ಬರೆದು ಕೊಟ್ಟಿದ್ದಾರೆ ಎನ್ನುವ ಬಗ್ಗೆ ಹಣ ಏನಾದರೂ ಪಾವತಿಸಿ ಹಕ್ಕನ್ನು ಬಿಟ್ಟು ಕೊಟ್ಟಿದ್ದಾರೆಯೇ ಎಂದರೆ ಇಲ್ಲ. ಆ ರೀತಿ ನನ್ನ ಹೆಸರಿಗೆ ಬರೆದು ಕೊಟ್ಟಿದ್ದಾರೆ ಎನ್ನುವ ಕಾಲಕ್ಕೆ ನಮ್ಮ ಕುಟುಂಬದಲ್ಲಿ ಬೇರೆ ಆಸ್ತಿಗಳು ಇರಲಿಲ್ಲ.

ತಾಯಿಯ ಹೆಸರಿನಲ್ಲಿರುವ ಆಸ್ತಿಯನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ವಾದಿಯ ಗಂಡ ಮತ್ತು 4ನೇ ಪ್ರತಿವಾದಿ ಹೊರ ದೇಶದಲ್ಲಿದ್ದ ಕಾರಣ ಸಾಲ ಪಡೆದುಕೊಳ್ಳುವ ಸಲುವಾಗಿ ಅವರ ಸಹಿಗಳನ್ನು ಪಡೆದುಕೊಳ್ಳಲಾಗಿದೆ ಎಂದರೆ ಸರಿಯಲ್ಲ. ವಾದಿ ತನ್ನ ಗಂಡ ಸಾಯುವವರೆಗೆ ನಮ್ಮ ಕುಟುಂಬದ ವ್ಯವಹಾರಗಳನ್ನು ನನ್ನ ಮೂಲಕ ಹಣ ಕೊಟ್ಟು ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ. ವಾದಿಯ ಗಂಡ ತೀರಿಕೊಂಡಿದ್ದಾರೆ , ಅವರಿಗೆ ಮೋಸ ಮಾಡುವುದು ಬೇಡ ಕೊಡಬೇಕಾದ ಹಿಸ್ಸೆಯನ್ನು ಕೊಡುವಂತೆ 4ನೇ ಪ್ರತಿವಾದಿ ನನಗೆ ಹಲವಾರು ಬಾರಿ ಹೇಳಿದ್ದಾರೆ ಮತ್ತು ಸಂದೇಶವನ್ನು ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗ ವಾದಿಗೆ ರೂ.4 ಕೋಟಿ ಹಣ ಕೊಡುವುದಾಗಿ ಒಪ್ಪಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ನಾನು ಹುಣಸೂರಿನಲ್ಲಿ 4 ಸರ್ವೆ ನಂಬರಿನಲ್ಲಿ ಜಮೀನು ಖರೀದಿಸಿದ್ದೇನೆ. ಯಾವ ವರ್ಷದಲ್ಲಿ ಖರೀದಿಸಿದ್ದೀರಿ ಎಂದರೆ 1985 ರಲ್ಲಿ ಇರಬಹುದು. ಸದರಿ ಜಮೀನನ್ನು ಒಂದೇ ಬಾರಿಗೆ ಕ್ರಯ ಪತ್ರ ಮಾಡಿಸಿಕೊಂಡಿದ್ದೇನೆ. ನಾನು ಹುಣಸೂರಿನಲ್ಲಿ 25 ಎಕರೆ ಜಮೀನು ಖರೀದಿಸುವಾಗ ವಾದಿಯಿಂದ ರೂ.10 ಲಕ್ಷ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಗಂಡನ ಹೆಸರಿನಲ್ಲಿ ಯಾವುದೇ ಕಂದಾಯ ದಾಖಲೆಗಳು ಇಲ್ಲದೇ ಇದ್ದ ಕಾರಣ ನನ್ನ ಹೆಸರಿಗೆ ಕ್ರಯ ಪತ್ರ ಮಾಡದಲಾಗಿದೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕಾಣಿಸಿದ ಇಂಡಸ್ಟ್ರೀಯಲ್ ಸೈಟ್ ಗಳನ್ನು ನನ್ನ ಹೆಸರಿನಲ್ಲಿ ಖರೀದಿಸುವ ಕಾಲಕ್ಕೆ ವಾದಿ , ಅವರ ಗಂಡ ಮತ್ತು 4ನೇ ಪ್ರತಿವಾದಿ ಡಾಲರ್ ರೂಪದಲ್ಲಿ ಅಮೇರಿಕಾದಿಂದ ನನ್ನ ಖಾತೆ ಇರುವ ಎಸ್.ಬಿ.ಎಂ. ಅವಿನ್ಯೂ ರಸ್ತೆ , ಬೆಂಗಳೂರಿನ ಖಾತೆಗೆ ಹಣ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ಹುಣಸೂರಿನಲ್ಲಿ ಖರೀದಿಸಿದ 25 ಎಕರೆ ಜಮೀನಿನಲ್ಲಿ ತೆಂಗಿನ ತೋಟ , ಶ್ರೀಗಂಧದ ತೋಟ ಮತ್ತು ಮಂಡ್ಯದಲ್ಲಿ ಖರೀದಿಸಿದ ಫ್ಯಾಕ್ಟರಿ ಸೈಟ್ ಗಳನ್ನು ವಾದಿ ಮತ್ತು ಅವರ ಗಂಡ ನನ್ನ ಮೂಲಕ ಕುಟುಂಬದ ಪರವಾಗಿ ಅಭಿವೃದ್ಧಿ ಪಡಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಗಂಡ ನಮ್ಮ ಕುಟುಂಬದ ಪರವಾಗಿ ಮಂಡ್ಯದಲ್ಲಿ

ನರ್ಸಿಂಗ್ ಹೋಂ ಕಟ್ಟಿಸಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತು ಗಳ ಪೈಕಿ ಮಂಡ್ಯದಲ್ಲಿರುವ ಆಸ್ತಿಯಲ್ಲಿ ಆಸ್ಪತ್ರೆ ಮತ್ತು ನರ್ಸಿಂಗ್‌ಹೋಂ ಇದೆ. ಮೇಲೆ ಹೇಳಿದ ಎಲ್ಲಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದರೂ ಸಹ ವಾದಿಯ ಗಂಡ ತೀರಿಕೊಂಡ ನಂತರ ಅವರಿಗೆ ಒಬ್ಬಳೇ ಮಗಳಿರುವ ಕಾರಣ ನಿಮಗೆ ಏಕೆ ಆಸ್ತಿ ಬೇಕಾಗಿದೆ ಎಂದು 2002 ರಿಂದ 2013 ರವರೆಗೆ ನಾನು ವಾದಿಯನ್ನು ಸತಾಯಿಸುತಾ ಬಂದೆ ಎಂದರೆ ಸರಿಯಲ್ಲ.

ನನ್ನ ಸಹೋದರರು , ಸಹೋದರಿಯರು ಹಾಗೂ ಮೃತ ಪಟ್ಟ ನನ್ನ ಸಹೋದರರ ವಾರಸುದಾರರು ವಾದಿಗೆ ಹಿಸ್ಸೆ ಕೊಡಬೇಕೆಂದು ನನಗೆ ಹಲವಾರು ಬಾರಿ ಹೇಳಿದರೂ ಕೂಡ ನಾನು ಅದಕ್ಕೆ ಒಪ್ಪಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. ವಾದಿ ಮಹಿಳೆಯಾಗಿರುವ ಕಾರಣ ಮಂಡ್ಯದಲ್ಲಿರುವ ನನ್ನ ಪ್ರಭಾವವನ್ನು ಬಳಸಿ ವಾದಿ ಮಂಡ್ಯದ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಪಡೆಯದಂತೆ ತಡೆದಿದ್ದೇನೆ ಎಂದರೆ ಸರಿಯಲ್ಲ. ವಾದಿ ಕುಟುಂಬದ ಸದಸ್ಯರನ್ನು ಕರೆದುಕೊಂಡು ಹೋಗಿ ದಾಖಲೆಗಳನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ವಾದಿ ಹಾಕದಂತೆ ತಡೆದಿದ್ದೇನೆ ಎಂದರೆ ಸರಿಯಲ್ಲ. ವಾದಿ ನನಗೆ ಹೆದರಿ ವಿದಿಯಿಲ್ಲದೇ ಮಂಡ್ಯ ಬಿಟ್ಟು ಇಲ್ಲಿ ಬಂದು ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ.

2013 ರಿಂದ ಹುಣಸೂರಿನಲ್ಲಿರುವ 25 ಎಕರೆ ಜಮೀನಿನಿಂದ ನನಗೆ ವಾರ್ಷಿಕ 2 ರಿಂದ 3 ಲಕ್ಷದಷ್ಟು ಆದಾಯ ಬರುತ್ತದೆ. ಮೇಲೆ ಹೇಳಿದ 25 ಎಕರೆಯಿಂದ ನನಗೆ ವಾರ್ಷಿಕ ರೂ.25 ಲಕ್ಷದಷ್ಟು ಆದಾಯ ಬರುತ್ತದೆ ಎಂದರೆ ಸರಿಯಲ್ಲ. ಮಂಡ್ಯದಲ್ಲಿರುವ ಫ್ಯಾಕ್ಟರಿಯಿಂದ ಮತ್ತು ಬಾಡಿಗೆಯಿಂದ ನನಗೆ ವಾರ್ಷಿಕ ರೂ.25 ಲಕ್ಷದಿಂದ 30 ಲಕ್ಷದಷ್ಟು ಆದಾಯ ಬರುತ್ತದೆ ಎಂದರೆ ಸರಿಯಲ್ಲ. 2008 ರಿಂದ 2013 ರವರೆಗೆ 2 ಫ್ಯಾಕ್ಟರಿಯಿಂದ ಎಷ್ಟು ಬಾಡಿಗೆ ಬರುತ್ತಿತ್ತು ಎಂದರೆ ಬಾಡಿಗೆ ಬರುತ್ತಿರಲಿಲ್ಲ. ಈಗ ಫ್ಯಾಕ್ಟರಿಗಳನ್ನು ನನ್ನ ಮಗ ನಡೆಸುತ್ತಿದ್ದಾರೆ. 2008 ರಿಂದ 2013 ರವರೆಗೆ ಫ್ಯಾಕ್ಟರಿಗಳನ್ನು ಯಾರು ನಡೆಸುತ್ತಿದ್ದರು ಎಂದರೆ ನಾನು 2004 ರಿಂದಲೇ ಕಾಯಿಲೆ ಬಿದ್ದ ಕಾರಣ ನನ್ನ ಮಗನೇ ನೋಡಿಕೊಳ್ಳುತ್ತಿದ್ದಾರೆ. ಈಗ 2 ಫ್ಯಾಕ್ಟರಿಗಳಲ್ಲಿ ಏನು ನಡೆಸುತ್ತಿದ್ದಾರೆ ಎಂದರೆ ಫ್ಯಾಕ್ಟರಿ ಇಲ್ಲ ವ್ಯಾಪಾರ ಇದೆ. ಏನು ವ್ಯಾಪಾರ ನಡೆಸುತ್ತಿದ್ದೀರಿ ಎಂದರೆ ಕೃಷಿಗೆ ಉಪಯೋಗಿಸುವ ಯಂತ್ರೋಪಕರಗಳ ವ್ಯಾಪಾರ ನಡೆಸುತ್ತಿದ್ದಾರೆ. ಫ್ಯಾಕ್ಟರಿಗಳನ್ನು ನಿಮ್ಮ ಮಗನಿಗೆ ಬರೆದುಕೊಟ್ಟಿದ್ದೀರಾ ಎಂದರೆ ಇಲ್ಲ. ಸದರಿ ವ್ಯಾಪಾರದ ಲೈಸನ್ಸ್ ಯಾರ ಹೆಸರಿನಲ್ಲಿದೆ ಎಂದು ನೆನಪಿನಲ್ಲಿ ಇಲ್ಲ. ಸದರಿ ವ್ಯಾಪಾರದ ಲೈಸನ್ಸ್ , ಬ್ಯಾಂಕ್ ಖಾತೆ ಮತ್ತು ಎಲ್ಲಾ ವ್ಯವಹಾರ ನನ್ನ ಹೆಸರಿನಲ್ಲಿದೆ ಎಂದರೆ ನನ್ನ ಹೆಸರಿನಲ್ಲಿದ್ದರೂ ಕೂಡ ಮಗ ನೋಡಿಕೊಳ್ಳುತ್ತಿದ್ದಾನೆ. ಫ್ಯಾಕ್ಟರಿಯ ಆದಾಯದ ಬಗ್ಗೆ ಐ.ಟಿ.ಆರ್. ಸಲ್ಲಿಸುತ್ತೀರಾ ಎಂದರೆ ಗೊತ್ತಿಲ್ಲ. ಆಡಿಟರ್ ಅವರನ್ನು ಕೇಳಬೇಕು. 2013 ರಿಂದ 25.10.2025 ರವರೆಗೆ ನಾನು ಒಂದು ದಿನವೂ ಕೂಡ ಈ ದಾವೆಯಲ್ಲಿ ನ್ಯಾಯಾಲಯದ ಮುಂದೆ ಬಂದಿಲ್ಲ ಎಂದರೆ ಒಂದು ದಿನ ಬಂದ್ದಿದೆ. ಯಾವತ್ತು ಬಂದಿದ್ದೀರಿ ಎಂದರೆ ನೆನಪಿಲ್ಲ. ಆ ರೀತಿ ಬಂದಾಗ ದಾವೆಯ

ಆದೇಶಿಕ ಹಾಳೆಯ ಮೇಲೆ ಸಹಿ ಹಾಕಿದ್ದೀರ ಎಂದರೆ ಇಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಯಾರು ತಯಾರಿಸಿದ್ದಾರೆ ಎಂದು ನೆನಪಿಲ್ಲ. ಅದರಲ್ಲಿ ಏನೇನು ಬರೆದಿದೆ ಎಂದು ಕೂಲಂಕುಷವಾಗಿ ಇದುವರೆಗೂ ನನಗೆ ಗೊತ್ತಿಲ್ಲ ಎಂದರೆ ಸ್ವಲ್ಪ ಮಟ್ಟಿಗೆ ಗೊತ್ತಿದೆ. ಈ ದಾವೆಯ ಉಳಿದ ಪ್ರತಿವಾದಿಗಳು ನನ್ನ ಸಂಬಂಧಿಕರು ಎಂದರೆ ಕೆಲವರು ಮಾತ್ರ ಸಂಬಂಧಿಕರಿದ್ದಾರೆ. ಉಳಿದ ಪ್ರತಿವಾದಿಯರ ಪರವಾಗಿ ನಾನೇ ಪ್ರತಿವಾದ ಪತ್ರವನ್ನು ತಯಾರಿಸಿ ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದು ನನಗೆ ಗೊತ್ತಿದ್ದರೂ ಸಹ ವಾದಿ ಮತ್ತು 13ನೇ ಪ್ರತಿವಾದಿಗೆ ಏಕೆ ಹಿಸ್ಸೆ ಕೊಡಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಅವರ ಗಂಡ ಅಮೇರಿಕಾದಲ್ಲಿ ದುಡಿದು ಉಳಿಸಿದ ಹಣವನ್ನು ಕುಟುಂಬದ ಏಳಿಗೆಗಾಗಿ ಡಾಲರ್ ರೂಪದಲ್ಲಿ ನನ್ನ ಖಾತೆಗೆ ಜಮಾ ಮಾಡಿದ್ದರುಾ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯ ಗಂಡ ತೀರಿ ಹೋಗುವ 1-1/2 ವರ್ಷಕ್ಕೂ ಮೊದಲು ನಾನು , ವಾದಿ , ವಾದಿಯ ಗಂಡ ಮತ್ತು ಉಳಿದ ಎಲ್ಲಾ ಕುಟುಂಬಂದ ಸದಸ್ಯರು ಪೂಜಾ ಕಾರ್ಯಕ್ರಮಗಳಿಗೆ ಒಟ್ಟಾಗಿ ಭಾಗವಹಿಸಿ ಒಟ್ಟಾಗಿ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. 7ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿದ ಆಸ್ತಿಗಳಿಗೆ ಅವರ ತವರು ಮನೆಯಿಂದ ಹಣ ಸಹಾಯ ಮಾಡಿದ್ದಾರೆ ಎಂಬ ಬಗ್ಗೆ ದಾಖಲೆ ಇದೆಯೇ ಎಂದರೆ ಇಲ್ಲ. 7ನೇ ಪ್ರತಿವಾದಿಯ ತಂದೆ ತಾಯಿಯಾಗಲೀ ಸಹೋದರರಾಗಲೀ ಯಾವುದೇ ಹಣವನ್ನು ಬ್ಯಾಂಕ್ ಮೂಲಕ ವರ್ಗಾಯಿಸಿಲ್ಲ ಮತ್ತು ಡಿಡಿ ಮೂಲಕ ಕೊಟ್ಟಿಲ್ಲ , ಎಲ್ಲಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

ಸಹಿ/-

(ಅನಿತ)

ಪ್ರಧಾನ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.